*

P.C.R. 14/2025
PW- 1

ಪ್ರಮಾಣವಚನ ಭೋಧಿಸಲಾಯಿತು. ದಿಃ 06.03.2026

ಕಲಂ 223 ಅಡಿಯಲ್ಲಿ ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎ.ಟಿ.ಆರ್. ವಕೀಲರಿಂದ

ತಹಶೀಲ್ದಾರ್ ಚಿತ್ತಾಪುರ್ ರವರಿಗೆ ದಿಃ 03.12.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-1 ಎಂದು, ತಹಶೀಲ್ದಾರ್ ಚಿತ್ತಾಪುರ್ ರವರು ನೀಡಿದ ತಿಳುವಳಿಕೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ-2 ಎಂದು, ತಹಶೀಲ್ದಾರ್ ಚಿತ್ತಾಪುರ್ ರವರು ನೀಡಿದ ಜ್ಞಾಪನಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ-3 ಎಂದು, ತಹಶೀಲ್ದಾರ್ ಗ್ರೇಡ್ II ಚಿತ್ತಾಪುರ್ ರವರಿಗೆ ನೀಡಿದ ಅರ್ಜಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-4 ಎಂದು, ಕಾರ್ಯ ನಿರ್ವಾಹಕ ಅಧಿಕಾರಿಗಳು ಚಿತ್ತಾಪುರ್ ರವರಿಗೆ ದಿಃ 28.11.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-5 ಎಂದು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಕಲಬುರಗಿಯವರಿಗೆ ದಿಃ 29.11.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-6 ಎಂದು, ಜಿಲ್ಲಾಧಿಕಾರಿಗಳು ಕಲಬುರಗಿಯವರಿಗೆ ದಿಃ 04.12.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-7 ಎಂದು, ಆರಕ್ಷಕ ಉಪನಿರೀಕ್ಷಕರು ವಾಡಿ ಪೋಲೀಸ್ ಠಾಣೆಯವರಿಗೆ ದಿಃ 04.12.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-8 ಎಂದು, ಪೋಲೀಸ್ ಅಧೀಕ್ಷಕರು ಕಲಬುರಗಿಯವರಿಗೆ ದಿಃ 04.12.2024ರಂದು ನೀಡಿದ ಮನವಿಯ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-9 ಎಂದು, ಮಾಹಿತಿ ಹಕ್ಕು ಅಡಿಯಲ್ಲಿ ಚಿತ್ತಾಪುರ್ ತಹಶೀಲ್ದಾರ್ ನೀಡಿದ ಮೆಮೊ ಹಾಗೂ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಸಿ-10 ಎಂದು, ಮುಖ್ಯೋಪಾಧ್ಯಾಯರು ಸರಕಾರಿ ಪ್ರೌಢ ಶಾಲೆ ರಾವೂರು ರವರು ದಿಃ19.11.2024ರಂದು ನೀಡಿದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ- 11 ಎಂದು, ಸೆಂಟ್ ಆ್ಯಬ್ರೋಸ್ ಕಾನ್ವೆಂಟ್ ಹೈ ಸ್ಕೂಲ್ ವಾಡಿ ಇದರ ಹೆಡ್ ಮಿಸ್ಟ್ರೆಸ್ ರವರು ನೀಡಿದ ಸ್ಟಡಿ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದು ಅದನ್ನು ನಿಸಿ-12 ಎಂದು ಗುರುತಿಸಲಾಯಿತು. ಹಿಂದುಳಿದ ವರ್ಗಗಳಿಗೆ ಸೇರಿದ

ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ- 13 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.